ಶ್ರೀ ವಾಟಾಳ್ ನಾಗರಾಜ್ : ಆದರೆ ಮಾನ್ಯ ಶಿವರಾಮೇಗೌಡ್ರು ಉದ್ದೇಶವಾಗಿ ಈ ರೀತಿಯಾಗಿ ಮಾಡುವುದು ಸರಿಯಿಲ್ಲ. ಕಾವೇರಿಯ ಬಗ್ಗೆ ನಮಗೂ ಕಳಕಳಿ ಇದೆ. ಶಿವರಾಮೇಗೌಡ್ರು ಮುಖ್ಯಮಂತ್ರಿಗಳಿಗೆ ಏತಕ್ಕೆ ಹೇಳಲಿಲ್ಲ.

Chairman : Nothing will go on record.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷೆಣಿಯವರೆ, ಶ್ರೀ ಎಲ್.ಆರ್. ಶಿವರಾಮೇಗೌಡರು ನಾನೇ ಕಾವೇರಿ ಬಗ್ಗೆ ಹೋರಾಟ ಮಾಡಿದೆ, ಇನ್ಯಾರು ಹೋರಾಟ ಮಾಡಿಲ್ಲ ಎನ್ನುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷೆಣಿಯವರೆ, ಇವರು ಯಾವ ಹೋರಾಟಗಾರರು?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ರಾಜ್ಯಪಾಲರ ಭವನದ ಗೇಟಿಗೆ ಒಂದು ಬೀಗ ಹಾಕಿದ್ದೇವೆ. ಅದಕ್ಕೆಂತ ಬೇಕಾಗಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಶ್ರೀ ವಾಟಾಳ್ ನಾಗರಾಜ್‌ರವರ ಜೊತೆ ಹೋದರೆ ಒಂದು ಪ್ರಚಾರ ಸಿಗುತ್ತದೆಂದು ಹೋಗಿದ್ದಾರಷ್ಟೆ ಬೇರೇನೂ ಇಲ್ಲ.

ಶ್ರೀ ಬಿ.ಎಚ್. ಬನ್ನಿಕೋಡ್ : ಶ್ರೀ ಶಿವರಾಮೇಗೌಡರು ಒಂದು ನಾಟಕ ನಡೆಸುತ್ತಿದ್ದಾರೆ.

ಟೇರ್ಕನ್ : ಶಿವರಾಮೇಗೌಡರೆ, ನೀವು ನಮಗೆ ಮಾತ್ರ ಅಗೌರವ ತೋರಿಸಲಿಲ್ಲ. Leader of the Opposition, a very respected leader. ಅವರ ಬಗ್ಗೆ ತುಚ್ಛವಾಗಿ ಮಾತನಾಡಿದ್ದೀರಿ. Please expunge it.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ನನಗೆ ವಿರೋಧ ಪಕ್ಷದ ನಾಯಕರ ಬಗ್ಗೆ ಗೌರವವಿದೆ.

Chairman : I am not allowing.

(Interruptions)

Chairman : The Speaker may, direct any member whose conduct is, in his opinion, grossly disorderly to withdraw immediately from the House *and any member so ordered to with draw shall do so forthwith and shall absent himself during the remainder of the day's sitting.*

Will you please do that? Will you please withdraw from the House?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಶ್ರೀ ರಾಯರೆಡ್ಡಿಯವರೆ, ಈ ಸದನದಲ್ಲಿ ಬಹಳ ಹಗುರವಾಗಿ ಮಾತನಾಡುವುದು ಬೇಕಾಗಿಲ್ಲ. ಏನು ಟೇಮಾರಿ ಹಾಕುವುದು? ನಾನೇನು ಅಂತಹ ಅಪವಾದ ಮಾಡಿರುವುದು? ನಾನೇನಾದರೂ ತಪ್ಪು ಮಾಡಿದ್ದರೆ ಟೇಮಾರಿ ಹಾಕಲಿ.

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಎಚ್. ಬನ್ನಿಕೋಡ್‌ರವರು ಸಭಾತ್ಯಾಗ ಮಾಡಿದರು).

Chairman : He is ordered to withdraw but he is not doing it.

ಶ್ರೀ ಸಿ. ಬೈರೇಗೌಡ : ತಾವು ತೀರ್ಪು ಕೊಟ್ಟಿದ್ದೀರಿ. ತಮ್ಮ ತೀರ್ಪಿಗಾದರೂ ಬೆಲೆ ಇದೆಯೇ ? ಇಲ್ಲವೇ? ತಮ್ಮ ತೀರ್ಪಿಗೆ ಗೌರವ ಕೊಡಬೇಕೋ ಅಥವಾ ಬೇಡವೋ? ಎನ್ನತಕ್ಕಂಥಾದ್ದು ಮೊದಲು ತೀರ್ಮಾನವಾಗಬೇಕು. ತಾವು ಮಾನ್ಯ ಸದಸ್ಯರಾದ ಶ್ರೀ ಶಿವರಾಮೇಗೌಡರನ್ನು ಹೊರಗಡೆ ಹೋಗಬೇಕೆಂದು ಹೇಳಿದ್ದೀರಿ.

(ಗೊಂದಲ)

+ ಶ್ರೀ ಹೆ.ಜೆ.ಆರ್. ಸಿದ್ಧಾಯ್ (ಕನಕಪುರ) : ಮಾನ್ಯ ಅಧ್ಯಕ್ಷೆಣಿಯವರೆ, ಸರ್ಕಾರದವರು ಬಹಳ ಒಳ್ಳೆಯ ಉದ್ದೇಶದಿಂದ ಕೃಷ್ಣಾ ಪ್ರಾಧಿಕಾರವನ್ನು ರಚಿಸಬೇಕೆಂದು ಹೊರಟಿದ್ದಾರೆ. ನಮ್ಮ ರಾಜ್ಯಕ್ಕಾಗಿ ಬಹಳಷ್ಟು ಜನ ಕಷ್ಟಪಟ್ಟು ತ್ಯಾಗ ಮಾಡಿ, ಹಿರಿಯರು ರಾಜ್ಯದ ಏಕೀಕರಣಕ್ಕಾಗಿ ಹೋರಾಡಿದ್ದು,